02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ ಚನ್ನಗಿರಿ, ನ್ಯಾಯಾಲಯದಲ್ಲಿ

ಸಿ.ಸಿ.ನಂ:238/2018

| ಪಿರ್ಯಾದುದಾರರು : | ವಿರುದ್ಧ | ಆರೋಪಿತರು: |
|---|---|---|
| ಚನ್ನಗಿರಿ ಪೊಲೀಸ್ ಠಾಣೆ | | ಎ1. ಅಫ್ರೋಜ್ ಅಹಮ್ಮದ್ ಬಿನ್ ಮುನೀರ್ ಸಾಬ್<br>ವಯಸ್ಸು : 35 ವರ್ಷ, ಗಾರೆ ಕೆಲಸ,<br>ವಾಸ: ರಾಜಣ್ಣ ಬಡಾವಣೆ, ಚನ್ನಗಿರಿ ಟೌನ್.<br><br>ಎ2. ಕುಮಾರ ಯಾನೆ ಕುಮಾರ್ ಬಿನ್ ಕೆರೋಜಪ್ಪ,<br>ವಯಸ್ಸು : 34 ವರ್ಷ, ಪೆನಾಯಿಲ್ ಮಾರಾಟಗಾರ,<br>ವಾಸ. ಪಟೇಲ್ ನಗರ, ಚನ್ನಗಿರಿ ಟೌನ್.<br><br>ಎ3. ನಾಗೇಂದ್ರ ಬಿನ್ ನಿಂಗಪ್ಪ,<br>ವಯಸ್ಸು : 30 ವರ್ಷ,ಕೂಲಿ ಕೆಲಸ,<br>ವಾಸಃ ಪಟೇಲ್ ನಗರ, ಚನ್ನಗಿರಿ ಟೌನ್. |

## ದೋಷಾರೋಪಣೆ

ನಾನು ಶ್ರೀಮತಿ. ಪೂಜಾ ಬೆಳಕೇರಿ 2 ನೇ ಹೆಚ್ಚುವರಿ ದ್ವಿತಿಯ ದರ್ಜೆಯ ನ್ಯಾಯಿಕ ದಂಡಾಧಿಕಾರಿ, ಚನ್ನಗಿರಿ ಈ ಮೂಲಕ ನಿಮ್ಮ ಮೇಲೆ ಆಪಾಧಿಸುವುದೇನೆಂದರೆಃ

ದಿನಾಂಕಃ 28/02/2017 ರ ರಾತ್ರಿ 07.00 ಗಂಟೆ ಸಮಯದಲ್ಲಿ ಚನ್ನಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ನಲೂರು ಕ್ಯಾಂಪ್ ನಲ್ಲಿರುವ ಚಾಸಾ.1 ರವರ ಮನೆಗೆ ಹಾಕಿದ್ದ ಬೀಗವನ್ನು ಮುರಿದು ಮುರಿದು ಆರೋಪಿಗಳಾದ ನೀವುಗಳು ಮನೆಯ ಒಳಗೆ ಅಕ್ರಮಪ್ರವೇಶ ಮಾಡಿ ಭಾ. ದಂ .ಸಂಹಿತೆ ಕಲಂ 457 ಸಹ ವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

2.ಮೇಲೆ ತಿಳಿಸಿದ ಸ್ಥಳ ಸಮಯ ದಿನಾಂಕದಂದು ಆರೋಪಿಗಳಾದ ನೀವುಗಳು ಚಾಸಾ 1 ರವರ ಮನೆಯಲ್ಲಿದ್ದ ಗಾಡ್ರೇಜ್ ಬಿರುವುನಿಂದ ಅಂದಾಜು 62,500/- ರೂ ಬೆಲೆ ಬಾಳುವ 02 ತೊಲದ ಬಂಗಾರದ ನೆಕ್ಲೆಸ್ ಮತು ½ ತೊಲ ಕಿವಿಯ ಜುಮ್ಕೆ ಹಾಗೂ 60,000/- ರೂ ನಗದು ಹಣವನ್ನು ಕಳುವು ಮಾಡಿರುವುರಿಂದ, ಭಾ.ದಂ .ಸಂಹಿತೆ ಕಲಂ 380 ಸಹವಾಚಕ ಕಲಂ 34 ರಡಿಯಲ್ಲಿ ಈ ನ್ಯಾಯಾಲಯದ ಸಂಜ್ಞಾನದೊಳಗೆ ಶಿಕ್ಷಾರ್ಹ ಅಪರಾಧವನ್ನು ಎಸಗಿರುತ್ತೀರಿ.

ಮೇಲೆ ಹೇಳಿದ ಆರೋಪಗಳ ಮೇಲೆ ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗಿರುತ್ತೀರಾ ಎಂದು ನಿರ್ದೇಶಿಸಿದ್ದೇನೆ.

ದಿನಾಂಕ:

(ಪೂಜಾ ಬೆಳಕೇರಿ)
02 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನಗಿರಿ